ಮೆ: ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್, ರವರು "ಗೊಣ್ಣಾಗರ ಮರಳು ಬ್ಲಾಕ್"ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಮಲಪ್ರಭಾ ನದಿ ದಡದ ಪಕ್ಕದ ಸರ್ವೆ ನಂ. 1 ರಿಂದ 4, 6, 267, 266, 265, 263(ಪಿ), 264(ಪಿ), ಗೊಣ್ಣಾಗರ ಗ್ರಾಮ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 22.00 ಎಕರೆ (8.90 ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 73,504 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ಹಿನ್ನೆಲೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.

**ದಿನಾಂಕ:** 05-07-2022.

**ವೇಳೆ:** ಬೆಳಿಗ್ಗೆ 11:00 ಗಂಟೆ.

**ಸ್ಥಳ:** ಶ್ರೀ ಬಲಮುರಿ ಗಣಪತಿ ದೇವಸ್ಥಾನದ ಹತ್ತಿರ, ಸುರೇಬಾನ ರಸ್ತೆ, ಗೊಣ್ಣಾಗರ ಗ್ರಾಮ, ರಾಮದುರ್ಗ ತಾಲ್ಲೂಕ, ಬೆಳಗಾವಿ ಜಿಲ್ಲೆ.

ಮೆ: ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್, ರವರು "ಗೊಣ್ಣಾಗರ ಮರಳು ಬ್ಲಾಕ್"ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಮಲಪ್ರಭಾ ನದಿ ದಡದ ಪಕ್ಕದ ಸರ್ವೆ ನಂ. 1 ರಿಂದ 4, 6, 267, 266, 265, 263(ಪಿ), 264(ಪಿ), ಗೊಣ್ಣಾಗರ ಗ್ರಾಮ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 22.00 ಎಕರೆ (8.90 ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 73,504 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 05-07-2022 ರಂದು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದ ಹತ್ತಿರದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಮೆ: ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್, "ಗೊಣ್ಣಾಗರ ಮರಳು ಬ್ಲಾಕ್", ಗೊಣ್ಣಾಗರ ಗ್ರಾಮ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | : | ಅನುಬಂಧ-5 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ 14-09-2006 ಮತ್ತು ತದನಂತರದ ತಿದ್ದುಪಡಿ ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ಅದರಂತೆ ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆ Terms of Reference (ಟಿಓಆರ್) ಅನ್ನು ಅಂತಿಮಗೊಳಿಸಿ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕೋರುವಂತೆ ತಿಳಿಸಿರುತ್ತಾರೆ. ಮೆ: ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್, "ಗೊಣ್ಣಾಗರ ಮರಳು ಬ್ಲಾಕ್", ಗೊಣ್ಣಾಗರ ಗ್ರಾಮ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅದಿಭೋಗದಾರರು ಪತ್ರದ ದಿನಾಂಕ: 12-02-2022 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದಲ್ಲಿ ಪತ್ರಿಕೆಗಳಾದ "ಕನ್ನಡ ಪ್ರಭ" (ಕನ್ನಡ) ಮತ್ತು "ಟೈಮ್ಸ್ ಆಫ್ ಇಂಡಿಯಾ" (ಆಂಗ್ಲ ಭಾಷೆ)ಯಲ್ಲಿ ದಿನಾಂಕ: 05-06-2022 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ "ವಿಜಯವಾಣಿ" ದಿನ ಪತ್ರಿಕೆಯಲ್ಲಿ ದಿನಾಂಕ: 10-06-2022 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲು ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಇದುವರೆಗೆ ಲಿಖಿತ ರೂಪದಲ್ಲಿ ಸಲಹೆ, ಅನಿಸಿಕೆಗಳನ್ನು, ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ಸಾರ್ವಜನಿಕರು ಸಲ್ಲಿಸಿರುವುದಿಲ್ಲ.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 05-07-2022 ರಂದು ಬೆಳಿಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಜಗದೀಶ ಐ. ಎಚ್. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-1 ಇವರು ಶ್ರೀ ನಿತೇಶ್ ಕೆ. ಪಾಟೀಲ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಶ್ರೀ ರಾಜಶೇಖರ ಪುರಾಣಿಕ, ಹಿರಿಯ ಪರಿಸರ ಅಧಿಕಾರಿಗಳು (ಪ್ರಭಾರಿ), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಧಾರವಾಡರವರನ್ನು ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಒಂಭತ್ತು ಕಛೇರಿಗಳಲ್ಲಿ ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಮೆ: ಹಬರ್ಟ ಎನ್ವಿರೋ ಕೇರ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ಚೆನ್ನೈ ರವರು ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿರವರು ಯೋಜನೆಯ ಸಲಹೆಗಾರರಿಗೆ ಶಕ್ತಿಬಿಂದು ಪ್ರದರ್ಶನವನ್ನು ನೀಡಲು ತಿಳಿಸಿದರು.

**ಶ್ರೀ ರಾಘವ, ಹಟ್ಟಿ ಗೋಲ್ಡ ಮೈನ್ಸ್, ರಾಯಚೂರ:** ಇವರು ಮಾತನಾಡಿ, ಎಲ್ಲರಿಗೂ ನಮಸ್ಕಾರ ಇಂದಿನ ದಿನ ಗೊಣ್ಣಾಗರ ಮರಳು ಬ್ಲಾಕ್‌ನ್ನು ಸರ್ಕಾರದ ವತಿಯಿಂದ ಹಟ್ಟಿ ಗೋಲ್ಡ್ ಮೈನ್ಸದವರಿಗೆ ನಡೆಸುವ ಜವಾಬ್ದಾರಿಯನ್ನು ಕಲ್ಪಿಸಿಕೊಡಲಾಗಿದೆ. ನೂತನ ಮರಳು ನೀತಿಯ 2020ರ ಪ್ರಕಾರ ಹೊಸದಾಗಿ ಮರಳು ಬ್ಲಾಕ್‌ಗಳನ್ನು ಕರ್ನಾಟಕ ಸರ್ಕಾರದ ವತಿಯಿಂದ ಮಾಡಬೇಕು. ಇನ್ನು ಮುಂದೆ ಯಾವುದೇ ತರಹದ ಖಾಸಗಿಯವರಿಗೆ ಕೊಡಬಾರದು ಏಕೆಂದರೆ ಜನಸಾಮಾನ್ಯರಿಗೆ, ಎಲ್ಲರಿಗೂ ಮರಳು ಸಿಗುವಂತೆ ಆಗಬೇಕು ಹಾಗೂ ಒಂದು ಯೋಗ್ಯವಾದ ದರದಲ್ಲಿ ಕೊಡಬೇಕು. ಹಾಗೆ ಒಂದು ವೈಜ್ಞಾನಿಕ ರೀತಿಯಲ್ಲಿ ಮರಳನ್ನು ತೆಗೆಯುವ ಕೆಲಸವಾಗಬೇಕು ಎನ್ನುವ ಒಂದು

ನಿಟ್ಟಿನಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚನೆಮಾಡಿದ್ದಾರೆ. ಆ ಸಮಿತಿಯಲ್ಲಿ ಎಲ್ಲ ಸರ್ಕಾರಿ ಇಲಾಖೆಗಳಾದ ಅರಣ್ಯ ಇಲಾಖೆ, ನೀರಾವರಿ ಇಲಾಖೆ, ಲೋಕೋಪಯೋಗಿ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರೆಲ್ಲರೂ ಆ ಸಮಿತಿಯಲ್ಲಿ ಇರುತ್ತಾರೆ. ಇವರು ಸರ್ಕಾರದ ವತಿಯಿಂದ ನಡೆಸುತ್ತಿರುವಂತಹ ಮರಳು ಕೆಲಸಗಳ ನಿಯಂತ್ರಣ ಮಾಡುತ್ತಾರೆ. ನಿಮಗೆ ಅನಿಸಬಹುದು ಏಕೆ ಹಟ್ಟಿ ಗೋಲ್ಡ್ ಮೈನ್ಸದವರಿಗೆ ಕೊಟ್ಟಿದ್ದಾರೆ ಅಂತ. ಏಕೆಂದರೆ ಇದು ಒಂದು ಸರ್ಕಾರೇತರ ಕಂಪನಿ. ಸರ್ಕಾರದ ವತಿಯಿಂದ ಉತ್ತರ ಕರ್ನಾಟಕದ ಎಲ್ಲಾ ಮರಳು ಬ್ಲಾಕ್‌ಗಳನ್ನು ಹಟ್ಟಿ ಗೋಲ್ಡ್ ಮೈನ್ಸ್‌ನವರು ನಡೆಸುವಂತೆ ಜವಾಬ್ದಾರಿಯನ್ನು ಕೊಟ್ಟಿರುತ್ತಾರೆ. ಆ ಒಂದು ನಿಟ್ಟಿನಲ್ಲಿ ಇವತ್ತು ಗೊಣ್ಣಾಗರ ಮರಳು ಬ್ಲಾಕ್ ನಂಬರ 1ರ ಗೋಸ್ಕರ ಪರಿಸರ ಸಾರ್ವಜನಿಕ ಸಭೆಯನ್ನು ಕರೆಯಲಾಗಿದೆ. ಇದರಿಂದ ಏನು ಉಪಯೋಗ ಅಂದರೆ ಜನಸಾಮಾನ್ಯರಿಗೆ ಇನ್ನು ಮುಂದೆ ಮರಳಿಗೋಸ್ಕರ ಅಲೆದಾಡುವಂತಿಲ್ಲ. ಸರ್ಕಾರದ ವತಿಯಿಂದ ಇದಕ್ಕೊಂದು ಸುಸಜ್ಜಿತವಾದ ವ್ಯವಸ್ಥೆಯನ್ನು ಮಾಡಿದೆ. ನೀವು ಹೇಗೆ ಮನೆಯಲ್ಲಿ ಕುಳಿತುಕೊಂಡು ಗ್ಯಾಸ್ ಸಿಲೆಂಡರನ್ನು ಬುಕ್ ಮಾಡುತ್ತಿರೋ, ಗ್ಯಾಸ್ ಸಿಲೆಂಡರ್ ತಮ್ಮ ಮನೆ ಬಾಗಿಲಗೆ ಹೇಗೆ ತಲುಪುತ್ತೋ, ಹಾಗೇ ಇನ್ನು ಮುಂದೆ ಮರಳು ಕೂಡಾ ನೀವು ಮೋಬೈಲ್ ಆನ್ ಲೈನ್ ಮುಖಾಂತರ ಬುಕ್ಕ ಮಾಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಿದ್ದಾರೆ. ಹಾಗೆ ಇದಕ್ಕೆ ನಿಗದಿ ಪಡಿಸುವ ದರ ಕೂಡಾ ತುಂಬಾ ಕಡಿಮೆ ಇದೆ. ಅಂದರೆ ಪ್ರತಿ ಟನ್‌ಗೆ ರೂ 700/-ಗಳನ್ನು ನಿಗದಿ ಮಾಡಿದ್ದಾರೆ. ಸರ್ಕಾರದಿಂದ ಪ್ರತಿಯೊಬ್ಬರಿಗೂ ಕೂಡಾ ಯಾರಿಗೆ ಎಷ್ಟು ಬೇಕು ಅಷ್ಟು ಮರಳನ್ನು ಒದಗಿಸುವ ಕಾರ್ಯಕ್ರಮ ಇದಾಗಿದೆ. ಹಾಗಾಗಿ ಇದರ ಜೊತೆಯಲ್ಲಿ ನಿಮ್ಮ ಗ್ರಾಮಕ್ಕೆ ಏನು ಉಪಯೋಗವಾಗುತ್ತದೆ ಎಂದು ತಿಳಿದುಕೊಳ್ಳುವುದಾದರೆ, ಈ ಮರಳು ಆದಾಯದಲ್ಲಿ ರಾಯಲ್ಟಿಯನ್ನು ಕಟ್ಟುತ್ತೇವೆ. ರಾಯಲ್ಟಿಯಿಂದ 25% ರಷ್ಟು ಗ್ರಾಮ ಪಂಚಾಯತಿಗೆ ಹೋಗುತ್ತದೆ. ಈ ಗ್ರಾಮ ಪಂಚಾಯಿತಿಯವರು ಈ 25% ಹಣವನ್ನು ತಮ್ಮ ಗ್ರಾಮದ ಅಭಿವೃದ್ಧಿಗಾಗಿ ಬಳಸಬಹುದು. ರಸ್ತೆ, ಶೌಚಾಲಯ, ಬೀದಿ ದೀಪಗಳು, ಚರಂಡಿ, ಸೌಕರ್ಯಗಳನ್ನು ಗ್ರಾಮ ಪಂಚಾಯಿತಿವತಿಯಿಂದ ಈ ಹಣವನ್ನು ಉಪಯೋಗ ಮಾಡಬಹುದಾಗಿದೆ. ಹಾಗಾಗಿ ಈ ಒಂದು ಯೋಜನೆಯಿಂದ ಸರ್ಕಾರಕ್ಕೆ ರಾಜಧನ ಸೇರುತ್ತದೆ. ಇದರ ಜೊತೆಯಲ್ಲಿ ಗ್ರಾಮ ಪಂಚಾಯಿತಿಗೂ ಹಣ ಬರುತ್ತೆ. ಹಾಗೆ ಎಲ್ಲ ಸಾಮಾನ್ಯ ಜನರಿಗೂ ತಮ್ಮ ಮನೆ ಗೋಡೆಗಳು ಕಟ್ಟುವಂತಹ ಕಟ್ಟಡಗಳಿಗೆ ಬೇಕಾದ ಮರಳು ಕೂಡಾ ಒಂದೇ ದರದಲ್ಲಿ ಎಲ್ಲರಿಗೂ ಸಿಗುವ ಒಂದು ಕಾರ್ಯಕ್ರಮವಾಗಿದೆ. ಹಾಗಾಗಿ ಇದರಿಂದ ಒಂದು ವ್ಯವಸ್ಥಿತವಾಗಿ ಮರಳು ತೆಗೆಯುವ ಕಾರ್ಯಕ್ರಮ ಇದಾಗಿರುತ್ತದೆ. ಹಟ್ಟಿ ಗೋಲ್ಡ್ ಮೈನ್ಸ್‌ದವರು ಈ ಮರಳು ಗಣಿಗಾರಿಕೆ ಜೊತೆಗೆ ಈ ಗ್ರಾಮಕ್ಕೆ ಕೂಡಾ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಇದರಲ್ಲಿ ರಸ್ತೆಯ ಅಭಿವೃದ್ಧಿ, ಕುಡಿಯುವ ನೀರು, ಶಾಲೆಯ ಕಟ್ಟಡಗಳು ಹೀಗೆ ಗ್ರಾಮ ಪಂಚಾಯಿತಿಯವರ ಜೊತೆಗೆ ಚರ್ಚೆ ಮಾಡಿ, ಈ ಎಲ್ಲ ಕಾರ್ಯಕ್ರಮಗಳನ್ನು ಮಾಡುವ ವ್ಯವಸ್ಥೆ ಹಟ್ಟಿ ಗೋಲ್ಡ್ ಮೈನ್ಸ್ ವತಿಯಿಂದ ಇನ್ನು ಮುಂದೆ ನಡೆಯುತ್ತದೆ. ಇಂದಿನ ದಿನ ನಾವು ಮಾನ್ಯ ಜಿಲ್ಲಾಧಿಕಾರಿಗಳ ಮುಂದೆ ಸೇರುವ ಉದ್ದೇಶ ನಿಮ್ಮ ಎಲ್ಲರ ಅನಿಸಿಕೆಗಳು, ಅಹವಾಲಗಳು, ಮರಳು ಬ್ಲಾಕ್‌ಗೆ ಸಂಬಂಧಪಟ್ಟ ತಮ್ಮ ಅನಿಸಿಕೆಗಳನ್ನು ಮಾನ್ಯ ಜಿಲ್ಲಾಧಿಕಾರಿಯವರ ಮುಂದೆ ಪ್ರಸ್ತಾಪ ಮಾಡಬಹುದು. ಈ ಯೋಜನೆಯಿಂದ ಈಗಾಗಲೇ ತಿಳಿಸಿದ ಹಾಗೆ ಎಲ್ಲರಿಗೂ ಮರಳು ಸಿಗುವುದು ಜೊತೆಗೆ ಗ್ರಾಮ ಪಂಚಾಯಿತಿಗೂ ಹಣ ಸಿಗುತ್ತೆ. ಅದರ ಜೊತೆಗೆ ಸರ್ಕಾರಕ್ಕೂ ಹಣ ಸಿಗುತ್ತೆ. ಹಾಗೆಯೇ ವೈಜ್ಞಾನಿಕವಾಗಿ ಕೆಲಸ ನಡೆಯುತ್ತೆ. ಮರಳು ತುಂಬುವ ಕಾರ್ಯ ಬೆಳಿಗ್ಗೆ 6 ರಿಂದ ಸಾಯಂಕಾಲ 6 ರವರೆಗೆ ಮಾತ್ರ ಇರುತ್ತೆ. ಹಾಗೆ ಇಲ್ಲಿ ಕೆಲಸಕ್ಕೆ ಬೇಕಾಗುವ ಜನರನ್ನು ಕೂಡಾ ಸ್ಥಳೀಯರನ್ನು ತೆಗೆದುಕೊಳ್ಳಲಾಗುವುದು. ಅದರ ಜೊತೆಯಲ್ಲಿ ಎಲ್ಲರಿಗೂ ಮರಳು ಒದಗಿಸಿಕೊಡುವ ಕೆಲಸವನ್ನು ಸರ್ಕಾರದ ವತಿಯಿಂದ, ಹಟ್ಟಿ ಗೋಲ್ಡ್ ಮೈನ್ಸ್‌ನವರು ಮಾಡುತ್ತಾರೆ. ಹಾಗಾಗಿ ಈ ಒಂದು ಮರಳು ಬ್ಲಾಕ್‌ಗೆ ಈ ಗ್ರಾಮಸ್ಥರು, ಎಲ್ಲ ಗ್ರಾಮ ಪಂಚಾಯಿತಿಯವರು ಹಟ್ಟಿ ಗೋಲ್ಡ್ ಮೈನ್ಸ್‌ಗೆ ಇನ್ನು ಮುಂದೆ ಗಣಿಗಾರಿಕೆ ಮಾಡಲು ಸಹಕಾರ ಕೊಡಬೇಕೆಂದು ಕೇಳಿದರು. ಇನ್ನು ಮುಂದೆ ಮೆ: ಹಬರ್ಟ ಎನ್ವಿರೋ ಕೇರ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ಚೆನೈರವರು ಒಂದು ಅಧ್ಯಯನ ಮಾಡಿದ್ದಾರೆ. ಸುತ್ತಮುತ್ತ ಯಾವ ತರಹದ ಪರಿಸರ ನಿರ್ವಹಣೆ ಮಾಡುತ್ತೇವೆ, ಏನೇನು ಕ್ರಮಗಳನ್ನು ಕೈಗೊಳ್ಳುತ್ತೇವೆ ಅನ್ನುವುದರ ಬಗ್ಗೆ ಒಂದು ಅಧ್ಯಯನದ ವರದಿಯನ್ನು ತಮ್ಮ ಮುಂದೆ ಇಡಲಿದ್ದಾರೆ. ಇದನ್ನು ಕೇಳಿದ ನಂತರ ತಾವು ನಿಮ್ಮ ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಮುಂದೆ ತಿಳಿಸಬೇಕೆಂದು ಹೇಳಿದರು.

**ಮಾನ್ಯ ಜಿಲ್ಲಾಧಿಕಾರಿಗಳು:** ಇದರಲ್ಲಿ ಪ್ರೋಜೆಕ್ಟ ಕಾಸ್ಟ್ 2,07,24,032/- ಅಂತ ತಿಳಿಸಿದ್ದೀರಾ, ಅದರಲ್ಲಿ ಏನೇನು ಇದೆ ಅಂತಾ ತಿಳಿಸುತ್ತೀರಾ,

**ಶ್ರೀ ರಾಘವ, ಹಟ್ಟಿ ಗೋಲ್ಡ್ ಮೈನ್ಸ್:** ಸರ್ ಇದರಲ್ಲಿ ಯೋಜನೆಯ ಸ್ಥಳವನ್ನು ಪ್ರೋಟೆಕ್ಟ ಮಾಡಲು ಫೆನ್ಸಿಂಗ್, ಹಾಗೆಯೇ ಕಂಪ್ಯೂಟರೀಕೃತ ಮಾಡುತ್ತೇವೆ. ಮರಳು ತೆಗೆಯಲು ಬಳಸುವ ಯಂತ್ರಗಳ ಮೊತ್ತ ಸೇರಿದೆ.

**ಮಾನ್ಯ ಜಿಲ್ಲಾಧಿಕಾರಿಗಳು:** 2 ಕೋಟಿ ಬಗ್ಗೆ ಹೆಚ್ಚಿನ ಮಾಹಿತಿ ಪ್ರೋಜೆಕ್ಟ ರಿಪೋರ್ಟನಲ್ಲಿ ಲಭ್ಯ ಇರುವುದಿಲ್ಲ.

**ಅನಿಲ ಕುಮಾರ ಡೆಪ್ಯೂಟಿ ಮ್ಯಾನೇಜರ್ ಹಟ್ಟಿ ಗೋಲ್ಡ್ ಮೈನ್ಸ್:** ಅದು ಎಕ್ಸಾವೇಷನ್ ಕಾಸ್ಟ್, ಆಮೇಲೆ ನಮ್ಮದು ಸ್ಟಾಕ್ ಯಾರ್ಡನಲ್ಲಿ ಫೆನಸಿಂಗ್ ಮಾಡಲು, ಕಛೇರಿ, ಸೆಕ್ಯೂರಿಟಿ, ಡಾಟಾ ಎಂಟ್ರಿ ಆಪರೇಟರ್, ಕಂಪ್ಯೂಟರ್ಸ್ ಮತ್ತು ಸಾಫ್ಟವೇರ್ ಮರಳು ಮಿತ್ರ ಆಪ್ ಎಲ್ಲವನ್ನು ಸೇರಿಸಿ ಒಟ್ಟು 02 ಕೋಟಿ ಲೆಕ್ಕಾಚಾರ ಮಾಡಿದ್ದೇವೆ.

**ಮಾನ್ಯ ಜಿಲ್ಲಾಧಿಕಾರಿಗಳು:** ಅದರ ವಿವರವನ್ನು ಮಾಲಿನ್ಯ ನಿಯಂತ್ರಣ ಮಂಡಳಿಗೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಕೊಟ್ಟಿರುವುದಿಲ್ಲ. ನೀವು ಫೆನ್ಸಿಂಗ್‌ನ್ನು ಸ್ಟಾಕ್ ಯಾರ್ಡಗೆ ಹಾಕುತ್ತೀರಾ? ಅಥವಾ 22 ಎಕರೆಗೂ ಹಾಕುತ್ತೀರಾ?

**ಅನಿಲ ಕುಮಾರ ಡೆಪ್ಯೂಟಿ ಮ್ಯಾನೇಜರ್ ಹಟ್ಟಿ ಗೋಲ್ಡ್ ಮೈನ್ಸ್:** ಸ್ಟಾಕ್ ಯಾರ್ಡಗೆ ಮಾತ್ರ ಹಾಕುತ್ತೇವೆ. ಅಲ್ಲಿಂದಲೇ ವಿಲೇವಾರಿಯಾಗುತ್ತದೆ. ಅಲ್ಲಿಂದ ಯಾರು ಬೇಕಾದರೂ ಮರಳು ಖರೀದಿ ಮಾಡಬಹುದು.
**ಮಾನ್ಯ ಜಿಲ್ಲಾಧಿಕಾರಿಗಳು:** ನಿಮ್ಮ ಸ್ಟಾಕ್ ಯಾರ್ಡ ಎಲ್ಲಿ ಇರುತ್ತದೆ ಎಂದು ಕೇಳಿದರು.

**ಅನಿಲ ಕುಮಾರ ಡೆಪ್ಯೂಟಿ ಮ್ಯಾನೇಜರ್ ಹಟ್ಟಿ ಗೋಲ್ಡ್ ಮೈನ್ಸ್:** ಸ್ಟಾಕ್ ಯಾರ್ಡನ್ನು ಇಲ್ಲಿ ಹತ್ತಿರದ ಒಂದು ಕಿ. ಮೀ. ವ್ಯಾಪ್ತಿಯಲ್ಲಿ ಖಾಸಗಿ ಭೂಮಿಯಲ್ಲಿ ಮಾಡಲು ತೀರ್ಮಾನಿಸಿದ್ದೇವೆ.

**ಮಾನ್ಯ ಜಿಲ್ಲಾಧಿಕಾರಿಗಳು:** ಅದರ ಬಗ್ಗೆ ಪ್ರೋಜೆಕ್ಟ ರಿಪೋರ್ಟನಲ್ಲಿ ಮಾಹಿತಿ ಇರುವುದಿಲ್ಲ.

**ಅನಿಲ ಕುಮಾರ ಡೆಪ್ಯೂಟಿ ಮ್ಯಾನೇಜರ್ ಹಟ್ಟಿ ಗೋಲ್ಡ್ ಮೈನ್ಸ್:** ಖಾಸಗಿ ಜಮೀನು ತೆಗೆದುಕೊಳ್ಳುವುದರಿಂದ ಮತ್ತು ನಾವು ಗುತ್ತಿಗೆದಾರರಿಗೆ ಕಾಂಟ್ರಾಕ್ಟ ಕೊಡುವುದರಿಂದ ಖಾಸಗಿಯವರ ವ್ಯಾಪ್ತಿಯಲ್ಲಿ ಮಾಡುತ್ತೇವೆ. ನದಿಯಿಂದ ಸ್ಟಾಕ್ ಯಾರ್ಡಗೆ ತೆಗೆದುಕೊಂಡು ಬರುವ ಕೆಲಸವನ್ನು ಗುತ್ತಿಗೆ ನೀಡಲಾಗುತ್ತದೆ.

**ಮಾನ್ಯ ಜಿಲ್ಲಾಧಿಕಾರಿಗಳು:** ಹಾಗಾದರೆ ಮರಳನ್ನು ನದಿಯಿಂದ ಸ್ಟಾಕ್ ಯಾರ್ಡವರೆಗೂ ತರುವ ಕೆಲಸವನ್ನು ಗುತ್ತಿಗೆದಾರರಿಗೆ ನೀಡುತ್ತೀರಿ?

**ಅನಿಲ ಕುಮಾರ ಡೆಪ್ಯೂಟಿ ಮ್ಯಾನೇಜರ್ ಹಟ್ಟಿ ಗೋಲ್ಡ್ ಮೈನ್ಸ್:** ಸರ್ಕಾರಿ ಜಾಗೆ ಇದ್ದಲ್ಲಿ ನಾವೇ ಸ್ಟಾಕ್ ಯಾರ್ಡಗಳನ್ನು ಮಾಡುತ್ತಿದ್ದೆವು. ಸರಕಾರಿ ಜಾಗ ಇಲ್ಲದೆ ಇರುವ ಪಕ್ಷದಲ್ಲಿ, ಖಾಸಗಿ ಜಮೀನನ್ನು ಬಾಡಿಗೆ ಅಥವಾ ಲೀಸ್ ಆಧಾರ ಮೇಲೆ ತೆಗೆದುಕೊಳ್ಳುತ್ತೇವೆ. ಮರಳು ಸ್ಟಾಕ್ ಯಾರ್ಡಗೆ ಬಂದ ನಂತರ ವಿಲೇವಾರಿ ಮಾಡುವುದು ಹಟ್ಟಿ ಗೋಲ್ಡ್ ಮೈನ್ಸ್‌ನ ಅಧೀನದಲ್ಲಿರುತ್ತದೆ.

**ಮಾನ್ಯ ಜಿಲ್ಲಾಧಿಕಾರಿಗಳು:** ಅಲ್ಲಿಂದ ನೀವು ಟೆಂಡರ ಮೂಲಕ ಅಥವಾ ಯಾವ ಮುಖಾಂತರ ಮರಳನ್ನು ವಿಲೇವಾರಿ ಮಾಡುತ್ತೀರಾ? ಹಾಗಾದರೆ ನೀವು ಸಾಮಾನ್ಯ ಜನರಿಗೆ ಯಾವ ರೀತಿ ಮರಳನ್ನು ಒದಗಿಸುತ್ತೀರಾ? ಯಾಕೆಂದ್ರೆ ನೀವು ಸಭೆ ಮುಗಿದ ನಂತರ ಹೊರಟು ಹೋಗುತ್ತೀರಿ. ಆವಾಗ ಜನರು ಯಾರನ್ನು ಸಂಪರ್ಕಿಸಬೇಕು ಮತ್ತು ನಿಮ್ಮ ಪ್ರೋಜೆಕ್ಟ ರಿಪೋರ್ಟ ಪ್ರಕಾರ 15 ಸಿಬ್ಬಂದಿಗಳನ್ನು ನೇಮಕ ಮಾಡುತ್ತೀರಿ ಎಂದು ತಿಳಿಸಿರುತ್ತೀರಿ. ಅವರು ಯಾವ ರೀತಿ ಕೆಲಸ ನಿರ್ವಹಿಸುತ್ತಾರೆ ಹಾಗೂ ಮರಳು ತೆಗೆದುಕೊಳ್ಳಲು ಯಾರನ್ನು ಸಂಪರ್ಕಿಸಬೇಕು ಎಂದು ಕೇಳಿದರು.

**ಅನಿಲ ಕುಮಾರ ಡೆಪ್ಯೂಟಿ ಮ್ಯಾನೇಜರ್ ಹಟ್ಟಿ ಗೋಲ್ಡ್ ಮೈನ್ಸ್:** ಸ್ಟಾಕ್ ಯಾರ್ಡನಲ್ಲಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡುತ್ತೇವೆ ಮತ್ತು ಅವರ ಜೊತೆ ಸುಪರವೈಸರ್ ಪ್ರತಿ ದಿನದ ಸಂಪೂರ್ಣ ಮಾಹಿತಿಯನ್ನು ಸರ್ಕಾರಕ್ಕೆ ನೀಡುತ್ತಾರೆ, ಡಾಟಾ ಎಂಟ್ರಿ ಆಪರೇಟರ್, ಸೆಕ್ಯೂರಿಟಿ ಸಿಬ್ಬಂದಿಯನ್ನು ನೇಮಕ ಮಾಡುತ್ತೇವೆ. ಈಗಾಗಲೇ ಟೆಂಡರ್ ನೀಡಲಾಗಿರುತ್ತದೆ. ನವೆಂಬರ–2022 ರಿಂದ ಕೆಲಸ ಪ್ರಾರಂಭವಾಗುತ್ತದೆ. ಗಣಿಗಾರಿಕೆ ನಡೆಯುವ ಸ್ಥಳದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪಿಲ್ಲರಗಳನ್ನು ಹಾಕಲಾಗುತ್ತದೆ ಮತ್ತು ಮರಳು ತೆಗೆಯುವ ವಾಹನಗಳಿಗೆ ಗುತ್ತಿಗೆದಾರರ ಜೊತೆ ಒಪ್ಪಂದ ಮಾಡಿಕೊಳ್ಳಲಾಗುವುದು. ಕೇವಲ ಕಛೇರಿಯ ಕೆಲಸಗಳಿಗೆ ನಮ್ಮ ವಾಹನಗಳನ್ನು ಉಪಯೋಗಿಸುತ್ತೇವೆ. ಗುತ್ತಿಗೆದಾರರು ಪ್ರಥಮ ದರ್ಜೆ ಅಥವಾ ದ್ವಿತೀಯ ದರ್ಜೆ ಗುತ್ತಿಗೆದಾರರಾಗಿರಬೇಕು. ಲೋಕೋಪಯೋಗಿ ಇಲಾಖೆ ಅಥವಾ ಮೂರು ವರ್ಷ ಮರಳು ಗಣಿಗಾರಿಕೆ ಅನುಭವ ಹೊಂದಿರಬೇಕು. ಅಂತವರಿಗೆ ಗುತ್ತಿಗೆ ನೀಡುತ್ತೇವೆ ಮತ್ತು ಯಂತ್ರಗಳನ್ನು ಬೇರೆ ಬೇರೆಯಾಗಿ ಕೊಡಬೇಕಾಗುತ್ತದೆ. ನಮ್ಮದು ಕರ್ನಾಟಕದ ಆರು ಜಿಲ್ಲೆಗಳಲ್ಲಿ 42 ಬ್ಲಾಕ್‌ಗಳು ಇರುತ್ತವೆ. ಬೇರೆ ಬ್ಲಾಕ್‌ಗಳಿಂದ ಯಂತ್ರಗಳನ್ನು ತೆಗೆದುಕೊಂಡು ಇನ್ನೊಂದು ಬ್ಲಾಕ್‌ಗಳಿಗೆ ಹಾಕುವಂತಿಲ್ಲ. ಕನಾಟಕದಲ್ಲಿರುವ 42 ಬ್ಲಾಕ್‌ಗಳು ಯಾವುದೇ ಚಾಲನೆಯಲ್ಲಿ ಇರುವುದಿಲ್ಲ

ಈಗ 41 ಬ್ಲಾಕ್‌ಗಳಿಗೆ ಪರಿಸರ ಸಾರ್ವಜನಿಕ ಸಭೆ ಕಾರ್ಯ ಮುಗಿದಿರುತ್ತದೆ. ಕೊಪ್ಪಳ ಜಿಲ್ಲೆಯಲ್ಲಿ ಬರುವ 01 ಬ್ಲಾಕ್ ಪರಿಸರ ಸಾರ್ವಜನಿಕ ಸಭೆ ಆಗುವುದು ಬಾಕಿ ಇದೆ ಹಾಗೂ 30 ಬ್ಲಾಕ್‌ಗಳಿಗೆ ಟೆಂಡರ್ ಪ್ರಕ್ರಿಯೆ ಮುಗಿದಿರುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ ಇದೊಂದೇ ಬ್ಲಾಕ್ ಇರುತ್ತದೆ.

**ಮಾನ್ಯ ಜಿಲ್ಲಾಧಿಕಾರಿಗಳು:** ಒಟ್ಟು 22 ಎಕರೆ ಇದ್ದು ಎಷ್ಟು ವಾಹನಗಳನ್ನು ಇದಕ್ಕೆ ನೇಮಕ ಮಾಡಲಾಗುತ್ತದೆ? ಏಕೆಂದರೆ ಬೇರೆಯವರು ಬಂದು ಮರಳು ಗಣಿಗಾರಿಕೆ ಮಾಡುವ ಸಾಧ್ಯತೆ ಇದ್ದು, ನೀವು ಮಾಡುವ ಕೆಲಸ ಬೆಳಿಗ್ಗೆ 6 ರಿಂದ ಸಾಯಂಕಾಲ 6 ರವರೆಗೆ ಮಾತ್ರ ಇರುತ್ತದೆ ಹಾಗೂ ನೀವು ಗಣಿಗಾರಿಕೆ ಮಾಡುವ ಸ್ಥಳವು 1.2 ಕಿ.ಮೀ ಉದ್ದ ಇರುತ್ತದೆ. ಆದರೆ ರಾತ್ರಿ ಸಮಯದಲ್ಲಿ ಬೇರೆ ಯಾರಾದರೂ ಮರಳನ್ನು ತೆಗೆದುಕೊಂಡು ಹೋದರೆ ಯಾರು ಜವಾಬ್ದಾರರಾಗಿರುತ್ತೀರಿ? ಹಾಗೂ ನೀವು ತಿಳಿಸಿದ ಹಾಗೆ ಒಬ್ಬ ಸೆಕ್ಯೂರಿಟಿ ಇರುತ್ತಾನೆ ಎಂದು ತಿಳಿಸಿರುತ್ತೀರಿ. ಒಬ್ಬ ಸೆಕ್ಯೂರಿಟಿಯಿಂದ ಎಲ್ಲ ಸ್ಥಳವನ್ನು ನೋಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಅದಕ್ಕೆ ಸೆಕ್ಯೂರಿಟಿ ಸಿಬ್ಬಂದಿಯನ್ನು ಹೆಚ್ಚಿಗೆ ನೇಮಕ ಮಾಡಬೇಕೆಂದು ತಿಳಿಸಿದರು. 01 ಎಕರೆಯಲ್ಲಿ ಎಷ್ಟು ಮರಳು ಸ್ಟಾಕ್ ಮಾಡುತ್ತೀರಿ, ಆ ಮೇಲೆ ಆನ್‌ಲೈನ್ ಬುಕಿಂಗ್ ಮಾಡುವುದು ಹೇಗೆ? ಎಷ್ಟು ಪ್ರದೇಶಕ್ಕೆ ಈ ಮರಳನ್ನು ನೀಡುತ್ತೀರಿ, ಅನುಮತಿ ಎಷ್ಟು ಗಂಟೆಯವರೆಗೆ ಇರುತ್ತದೆ? ನೀವು ಯಾವ ರೀತಿ ಮರಳು ಸಾಗಾಣಿಕೆ ಮಾಡುತ್ತೀರಾ? ಸಾಮನ್ಯ ವ್ಯಕ್ತಿಯು ಜಿ.ಪಿ.ಎಸ್ ವಾಹನ ತೆಗೆದುಕೊಂಡು ಮರಳನ್ನು ತೆಗೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ ಆದರೆ ನೀವು ಸಾಮಾನ್ಯ ವ್ಯಕ್ತಿಗೆ ಯಾವ ರೀತಿ ಮರಳನ್ನು ನೀಡುತ್ತೀರಿ ಹಾಗೂ ಆಪ್ ಆನ್ ಲೈನ್ ಬುಕಿಂಗ್ ಚಾಲನೆಯಲ್ಲಿ ಇದೆಯಾ? ಚಾಲನೆಯಲ್ಲಿ ಇದ್ದರೆ ಇವತ್ತು ಗ್ರಾಮಸ್ಥರಿಗೆ ಯಾವ ರೀತಿ ಮರಳು ನೀಡುತ್ತೀರಿ? ಒಂದು ವಾಹನಕ್ಕೆ ಪ್ರತಿ ಕಿ.ಮೀ. ಎಷ್ಟು ದರವನ್ನು ನಿಗದಿ ಮಾಡಿರುತ್ತೀರಿ? ಎಂಬುದರ ಬಗ್ಗೆ ಪರಿಸರ ಸಾರ್ವಜನಿಕ ಸಭೆಯಲ್ಲಿ ವಿವರಿಸಬೇಕು ಎಂದು ಕೇಳಿದರು.

**ಅನಿಲ ಕುಮಾರ ಡೆಪ್ಯೂಟಿ ಮ್ಯಾನೇಜರ್ ಹಟ್ಟಿ ಗೋಲ್ಡ್ ಮೈನ್ಸ್:** ಸ್ಟಾಕ್ ಯಾರ್ಡನ್ನು ರೋಡ ಹತ್ತಿರ ಇರುವ ಸ್ಥಳದಲ್ಲಿ ಮಾಡುತ್ತೇವೆ. 30 ಸಾವಿರ ಟನ್ ಮರಳನ್ನು 01 ಎಕರೆಯಲ್ಲಿ ಸ್ಟಾಕ್ ಮಾಡುತ್ತೇವೆ. ಕನಾಟಕದ ಯಾವುದೇ ಸ್ಥಳಕ್ಕಾದರೂ ಕಳಿಸಬಹುದಾಗಿರುತ್ತದೆ. ಪ್ರತಿ ಟನ್‌ಗೆ ರೂ.700/-ರಂತೆ ನೀಡಲಾಗುತ್ತದೆ ಹಾಗೂ ಹತ್ತಿರ ಇರುವ ಬ್ಲಾಕ್‌ಗಳಿಂದ ಆಪ್ ಮುಖಾಂತರ ಜನರು ಮರಳನ್ನು ತೆಗೆದುಕೊಳ್ಳಲು ಬುಕ್ ಮಾಡಬಹುದಾಗಿದೆ. ಅನುಮತಿಯು ವಾಹನಗಳಿಗೆ ಬೆಳಿಗ್ಗೆ 6 ರಿಂದ ಸಾಯಂಕಾಲ 6 ವರೆಗೆ ಇರುತ್ತದೆ. ಮರಳನ್ನು ಜಿ.ಪಿ.ಎಸ್. ವಾಹನ ಮೂಲಕ ನೀಡುತ್ತೇವೆ ಮತ್ತು ಮರಳು ಮಿತ್ರ ಆಪ್‌ನಲ್ಲಿ ಬುಕ್ ಮಾಡುವ ಸಮದಲ್ಲಿ ಆ ವಾಹನಗಳ ಸಂಖ್ಯೆಗಳು ಕೂಡ ನಮೂದು ಆಗಿರುತ್ತದೆ ಹಾಗೂ ಬಾಡಿಗೆ ಕೂಡ ನೋಂದಾಯಿತವಾಗಿರುತ್ತದೆ. ಯಾರು ಬುಕಿಂಗ ಮಾಡಿರುತ್ತಾರೋ, ಅವರಿಗೆ ಹತ್ತಿರದ ಸ್ಟಾಕ್ ಯಾರ್ಡದಿಂದ ಮರಳನ್ನು ಈ ವಾಹನಗಳು ತೆಗೆದುಕೊಂಡು ಸರಬರಾಜು ಮಾಡುತ್ತವೆ. ಹತ್ತಿರವಿರುವ ಸ್ಟಾಕ್ ಯಾರ್ಡದಿಂದ ದರವು ನಿಗದಿ ಮಾಡಲಾಗುತ್ತದೆ.

**ಮಾನ್ಯ ಜಿಲ್ಲಾಧಿಕಾರಿಗಳು:** ಈ ಹಟ್ಟಿ ಗೋಲ್ಡ್ ಮೈನ್ಸ್‌ನವರು ಈ ಚಟುವಟಿಕೆಯನ್ನು ಮಾಡುವುದಿಲ್ಲ, ಬೇರೆಯವರಿಗೆ ಸಬ್ ಗುತ್ತಿಗೆ ನೀಡುತ್ತಾರೆ. ಇದರ ಬಗ್ಗೆ ತಮ್ಮ ಪರ ಹಾಗೂ ವಿರೋಧ ಅಭಿಪ್ರಾಯಗಳನ್ನು ಹೇಳುವುದಿದ್ದರೆ ವೇದಿಕೆ ಹತ್ತಿರ ಬಂದು ತಮ್ಮ ಹೆಸರು, ಊರು ಮತ್ತು ಅಭಿಪ್ರಾಯಗಳನ್ನು ತಿಳಿಸಬೇಕು ಎಂದು ಸಾರ್ವಜನಿಕರಿಗೆ ಹೇಳಿದರು.

ಸಾರ್ವಜನಿಕರು ವ್ಯಕ್ತಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

1. **ಶ್ರೀ ಪರಪ್ಪ ಜಂಗವಾಡ, ಅಧ್ಯಕ್ಷರು, ಗ್ರಾಮ ಪಂಚಾಯತ, ಗೋಣ್ಣಾಗರ:** ಸಬ್ ಗುತ್ತಿಗೆ ನೀಡುವುದರಿಂದ ಯಾವ ರೈತರಿಗೂ ಮರಳು ಸರಿಯಾಗಿ ಸಿಗುವುದಿಲ್ಲ. ಅಲ್ಲಿ ನೀಡಿರುವಂತ ಸರ್ವೆ ನಂಬರಗಳು 1, 2 ಮತ್ತು 4, 263, 267, 266 ಸರ್ವೆ ನಂಬರಗಳು, ಮಲಪ್ರಭಾ ನದಿ ಈಗಾಗಲೆ ಮೂಲ ಪಾತ್ರವನ್ನು ಬಿಟ್ಟು ಬೇರೆಯವರ ಜಮೀನಿನಲ್ಲಿ ಹರಿದು ಹೋಗಿರುತ್ತದೆ. ಸಂಪೂರ್ಣವಾಗಿ ಗೋಣ್ಣಾಗರ ಗ್ರಾಮದಲ್ಲಿರುವ ಮಾಲ್ಕಿ ಜಮೀನುಗಳಲ್ಲಿ ನದಿಯು ಹರಿಯುತ್ತಿದ್ದು ಅದಕ್ಕೆ ದಯಮಾಡಿ ತಮ್ಮಲ್ಲಿ ವಿನಂತಿ ಏನೆಂದರೆ ನದಿಯ ಮೂಲ ಪಾತ್ರವನ್ನು ಮೊದಲು ಸರ್ವೆ ಮಾಡಬೇಕು. ಈ ಕಂಪನಿಯವರು ಮತ್ತು ನದಿಯ ಮೂಲ ಪಾತ್ರದಲ್ಲಿ ಮರಳನ್ನು ತೆಗೆಯಬೇಕು. ಅದನ್ನು ಬಿಟ್ಟು ಬೇರೆ ಕಡೆ ನಮ್ಮ ಜಮೀನುಗಳಲ್ಲಿ ಮರಳು ತೆಗೆಯಬಾರದು ಹಾಗೂ ನದಿಯು ಸರ್ಕಾರದ ಜಮೀನುವಾಗಿರುವುದರಿಂದ ನಮ್ಮದೇನು ತಕರಾರು ಇರುವುದಿಲ್ಲ. ಆದರೆ ಆ ನದಿಯ ಮೂಲ ಪಾತ್ರ ಎಷ್ಟು ಆಳ ಇದೆ ಎಂಬುದನ್ನು ಸರ್ವೆ ಮಾಡಲಿ. ನಮ್ಮ ಜಮೀನು ಪಕ್ಕದಲ್ಲಿ ಇರುವ ಜಮೀನುಗಳ ಸರ್ವೆ ನಂಬರಗಳನ್ನು ಸರ್ವೆ ಮಾಡಬೇಕು ಹಾಗೂ ಇಲ್ಲಿಗೆ ನಮ್ಮ ಹದ್ದು ಇರುತ್ತದೆ ಎಂದು ತಿಳಿಸಬೇಕು. ಮುಂದೆ ಅವರು ಮರಳು ಗಣಿಗಾರಿಕೆ ಮಾಡಬಹುದಾಗಿದೆ.

ನಮ್ಮ ಉತ್ತರ ಭಾಗದಲ್ಲಿ ನದಿ ಇರುತ್ತದೆ. ಆ ಕಡೆ ಇರುವ ಜಮೀನುಗಳಿಗೆ ಗರಸು ಕಲ್ಲು ಇರುತ್ತದೆ. ನಮ್ಮ ಕಡೆ ಬಿಸಿ ಸಾಯಿಲ್ ಇರುತ್ತದೆ. ಮಹಾಪೂರ ಬಂದಾಗ ನಮ್ಮ ಜಮೀನುಗಳು ಕೊಚ್ಚಿಕೊಂಡು ಸುಮಾರಾಗಿ 100 ರಿಂದ 200 ಫೂಟ್ ಹಾಳಾಗಿರುತ್ತವೆ. ಮೂಲ ಪಾತ್ರ ಎಲ್ಲಿದೆ ಅಲ್ಲಿ ನದಿ ಹರಿಯುತ್ತಿಲ್ಲ. ಮೂಲ ಪಾತ್ರ ಎಲ್ಲಿದೆ ಅನ್ನುವುದನ್ನು ಗುರುತಿಸಿ, ಆ ಮೂಲ ಪಾತ್ರದಲ್ಲಿ ಮರಳು ಗಣಿಗಾರಿಕೆ ಮಾಡಬೇಕೆಂದು ನಮ್ಮ ವಿನಂತಿ ಮತ್ತು ನಮ್ಮ ಜಮೀನುಗಳು ಎಲ್ಲಿವೆ ಎಂದು ಗುರುತಿಸಿ, ಆ ಮೇಲೆ ಗಣಿಗಾರಿಕೆ ಮಾಡಬೇಕು. ಆ ಸಬ್ ಗುತ್ತಿಗೆದಾರರಿಗೆ ಕೊಡುವುದರಿಂದ ನಮಗೆ ಯಾರಿಗೂ ಸರಿಯಾಗಿ ಮರಳು ಸಿಗುವುದಿಲ್ಲವೆಂದು ದಯಮಾಡಿ ತಮ್ಮ ಗಮನಕ್ಕೆ ತರುತ್ತೇನೆ. ಅದನ್ನು ಎಲ್ಲ ಸಾರ್ವಜನಿಕರಿಗೆ ಸಿಗುವಂತೆ ಮಾಡಬೇಕು ಮತ್ತು ನಮಗೆ ಮುಖ್ಯವಾಗಿ ಮೊದಲು ಸರ್ವೆ ಆಗಬೇಕು ಎಂದು ತಿಳಿಸಿದರು.

2. **ನಿಂಗನಗೌಡ ಸೋಮನಗೌಡ ಈರನಗೌಡರ, ಗೊಣ್ಣಾಗರ ಗ್ರಾಮ:** ಈಗ ನಮ್ಮ ಊರ ಹಿರಿಯರು ಏನು ಹೇಳಿದ್ದಾರೆ, ಈ ಸರ್ಕಾರಿ ಭೂಮಿಯಲ್ಲಿ ಮಾಡಬೇಕೆಂದು ಆದೇಶ ನೀಡಿರುತ್ತೀರಿ. ಇದು ಹಗಲು ದರೋಡೆ ಮಾಡಿದ ಹಾಗೆ ಕಾಣುತ್ತದೆ. ಈಗ ನೀವು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಅವರು ನೀಡುತ್ತಿಲ್ಲ. ಹೀಗೆ ಇದ್ದಾಗ ಬೇರೆಯವರಿಗೆ ಗುತ್ತಿಗೆ ನೀಡಿದರೆ ಅವರು ಹೇಗೆ ಇರುತ್ತಾರೋ ಗೊತ್ತಿರುವುದಿಲ್ಲ. ಈಗ ನಿಮ್ಮದು ಮಿತಿ ಇರುತ್ತದೆ. 5 ಟನ್ ದಿಂದ 40 ಟನ್ ವರೆಗೂ ಲಾರಿಗೆ ಲೋಡ ಮಾಡಿದರೆ ರಸ್ತೆಗಳು ಹಾಳಾಗುತ್ತವೆ. ನಮ್ಮ ಹಿರಿಯರು ಹೇಳಿದ ಹಾಗೆ ಸರ್ಕಾರಿ ಜಮಿನು ಎಷ್ಟಿದೆ ಅದನ್ನು ಮೊದಲು ಸರ್ವೆ ಮಾಡಿಸಿ, ಆ ನಂತರ ಮರಳು ತುಂಬಬೇಕು. ಆದರೆ ಸರ್ವೆಮಾಡಿಸದೆ ಮರಳು ತುಂಬಿದರೆ ನಮ್ಮ ಎಲ್ಲ ಗ್ರಾಮಸ್ಥರದು ತಕರಾರು ಇರುತ್ತದೆ.

**ಮಾನ್ಯ ಜಿಲ್ಲಾಧಿಕಾರಿಗಳು:** ಕೇವಲ ಮರಳು ತೆಗೆಯುವ ಬಗ್ಗೆ ಮಾತ್ರ ಮಾತನಾಡಬೇಕು. ಅದನ್ನು ಬಿಟ್ಟು ಬೇರೆ ವಿಷಯ ಏನೇ ಇದ್ದರೂ ಹಿರಿಯರ ಜೊತೆ ಸಭೆ ಮುಗಿದ ಬಳಿಕ ಚರ್ಚಿಸಿ. ಮನವಿ ತೆಗೆದುಕೊಳ್ಳುತ್ತೇನೆ. ಮತ್ತೆ ಯಾರಾದರೂ ಮಾತನಾಡುವರಿದ್ದರೆ ವೇದಿಕೆ ಹತ್ತಿರ ಬಂದು ಮಾತನಾಡಬೇಕು. ಆ ಮೇಲೆ ಹಟ್ಟಿ ಗೋಲ್ಡ್ ಮೈನ್ಸ್‌ರವರು ಎಷ್ಟು ನಿಮ್ಮ ವಾಹನಗಳು ಚಲಿಸುತ್ತವೆ, ರಸ್ತೆ ಸುಧಾರಣೆ ಬಗ್ಗೆ ಏನು ಕ್ರಮ ಕೈಗೊಂಡಿರುತ್ತೀರಿ, ಹಾಗೂ ಹೊಸದಾಗಿ ಏನು ಯೋಜನೆಯನ್ನು ರೂಪಿಸಿದ್ದೀರಿ. ಈಗ ಇರುವ ರಸ್ತೆಯ ಮಾರ್ಗಕ್ಕೆ ಅಷ್ಟೊಂದು ಸಾಮರ್ಥ್ಯವಿಲ್ಲ. ಅದಕ್ಕೆ ಏನು ಯೋಜನೆ ರೂಪಿಸಿದ್ದೀರಿ ಹಾಗೂ ನದಿಯಿಂದ ನಿಮ್ಮ ಸ್ಟಾಕ್ ಯಾರ್ಡ 2 ಕಿ. ಮೀ ರಸ್ತೆಯು ದೂರವಿದ್ದರೆ ಮತ್ತೆ ನೀವು ಇಲ್ಲಿಂದ ಬೆಳಗಾವಿ ಜಿಲ್ಲೆ, ಬಾಗಲಕೋಟಿ ಜಿಲ್ಲೆ ಇತರೆ ಭಾಗಗಳಿಗೆ ವಾಹನಗಳನ್ನು ಕಳುಹಿಸುತ್ತೀರಿ? ಆ ರಸ್ತೆಗಳನ್ನು ಯಾರು ಸುಧಾರಣೆ ಮಾಡುತ್ತಾರೆ?

**ಅನಿಲ ಕುಮಾರ ಡೆಪ್ಯೂಟಿ ಮ್ಯಾನೇಜರ್ ಹಟ್ಟಿ ಗೋಲ್ಡ್ ಮೈನ್ಸ್:** ನಾವು ರಸ್ತೆಗಳ ಸುಧಾರಣೆಗೆ 7 ಲಕ್ಷ ರೂಪಾಯಿ ಮೀಸಲಿಟ್ಟಿದ್ದೇವೆ.

**ಮಾನ್ಯ ಜಿಲ್ಲಾಧಿಕಾರಿಗಳು:** ಕೇವಲ ರಸ್ತೆ ಸುಧಾರಣೆಗಾಗಿ 7 ಲಕ್ಷ ರೂಪಾಯಿ ಮೀಸಲಿಟ್ಟರೆ, ಆ ಹಣದಲ್ಲಿ 50 ಮೀಟರ ರಸ್ತೆ ಕೂಡಾ ಡಾಂಬರಿಕರಣ ಮಾಡಲು ಆಗುವುದಿಲ್ಲ.

3. **ಶಿವನಗೌಡ ಬಸನಗೌಡ ಪಾಟೀಲ, ಗೊಣ್ಣಾಗರ ಗ್ರಾಮ:** ಹಿರೇಮೂಲಂಗಿ ಮತ್ತು ಗೊಣ್ಣಾಗರ ಮಧ್ಯೆ ಸೇತುವೆ ಕಟ್ಟಿಸಲಿಕ್ಕೆ ಅಶೋಕ ಪಟ್ಟಣರವರು ಹೇಳಿದ್ದರು. ಅದನ್ನು ಕಟ್ಟಿರುತ್ತೇವೆ. ಶಿವಪ್ಪ ಹುಲ್ಲೂರ ಅನ್ನುವ ಹುಡಗನಿಗೆ ಅದರ ಹಣವನ್ನು ಇದುವರೆಗೂ ನೀಡಿರುವುದಿಲ್ಲ. ಇವರಾದ ನಂತರ ಯಾದವಾಡರವರು ಬಂದು ಇದರ ಮೊತ್ತವನ್ನು ಕೊಡಿಸುತ್ತೇನೆ ಎಂದು ಹೇಳಿದರು. ಆದರೆ ಇಲ್ಲಿಯವರೆಗೂ ಹಣ ನೀಡಿರುವುದಿಲ್ಲ.

**ಮಾನ್ಯ ಜಿಲ್ಲಾಧಿಕಾರಿಗಳು:** ಇದರ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಸರಿಪಡಿಸಬೇಕು. ಮರಳು ಗಣಿಗಾರಿಕೆಗೆ ಸಂಬಂಧಿಸಿದ ವಿಷಯವನ್ನು ಮಾತ್ರ ಮಾತನಾಡಬೇಕು.

4. **ಯೋಗೀಶ್ ಮಾರುತಿ ಘಾಟಗೆ, ಗೊಣ್ಣಾಗರ ಗ್ರಾಮ:** ಮರಳು ಗಣಿಗಾರಿಕೆಯನ್ನು ಸರ್ವೆ ನಂಬರ 263 ಮತ್ತು 264ರ ನಂಬರಗಳಲ್ಲಿ ಏನು ಆಗಿದೆ ಅಂದರೆ ಮರಳು ಗಣಿಗಾರಿಕೆ ಮಾಡುವುದರಿಂದ 263, 264 ಸರ್ವೆ ನಂಬರದಲ್ಲಿ ನದಿಯು ತಿರುವು ಪಡೆದಿರುತ್ತದೆ. 08 ಎಕರೆ ಆಸ್ತಿಯು ಕೊಚ್ಚಿಕೊಂಡು ಹೋಗಿರುತ್ತದೆ. ಇನ್ನೊಂದು ಕಡೆ 30 ಎಕರೆ ಜಮಿನು ಉಳಿದಿರುತ್ತದೆ. ಅಲ್ಲದೆ 30 ಎಕರೆ ಪಡ ಬಿದ್ದಿರುತ್ತದೆ. ಎಲ್ಲರಿಗೂ ಮನವಿ ನೀಡಿರುತ್ತೇವೆ, ಇಲ್ಲಿಯವರೆಗೂ ಸ್ಥಾನಿಕವಾಗಿ ಯಾವುದೇ ಕ್ರಮ ಆಗಿರುವುದಿಲ್ಲ. ನಮಗೆ ಜಮಿನಿನಿಂದ ಜಮೀನಿಗೆ ಹೋಗಲು ಅವಕಾಶವಿರುವುದಿಲ್ಲ. ಇದನ್ನು ಸರಿಪಡಿಸಬೇಕೆಂದು ಕೇಳುತ್ತೇನೆ.

5. **ಸಿದ್ದು ಹಳ್ಳಿ, ಗೊಣ್ಣಾಗರ ಗ್ರಾಮಸ್ಥ:** ಮಾನ್ಯರೆ, ಈಗ ತಾನೆ ನೀವು ಹಟ್ಟಿ ಗೋಲ್ಡ್ ಮೈನ್ಸ್‌ದವರಿಗೆ ಒಂದು ಪ್ರಶ್ನೆ ಕೇಳಿದ್ದೀರಿ, ಟೆಂಡರ ಯಾವಾಗ ಅನ್ವಯವಾಗುತ್ತೆ ಎಂದು ಕೇಳಿದ್ದೀರಿ, ಅವರು 4 ದಿನ ಹಿಂದೆ ಎಂದು ಹೇಳಿದರು. ಕೊನೆಯ ದಿನಾಂಕ ಯಾವಾಗ ಅಂತ ಕೇಳಿದ್ದೀರಿ, ಅವರು ಕೊನೆಯ ದಿನಾಂಕ ಜುಲೈ 25

ಎಂದು ಹೇಳಿದರು. 25 ಜುಲೈ ಇನ್ನೂ ಮುಂದೆ ಇರುತ್ತದೆ. ಈಗ ಜುಲೈ 5. ಇವತ್ತು ಅವರು ನಿಮಗೆ ಉತ್ತರ ನೀಡಿದ್ದು 25 ನೇ ಜುಲೈ ಎಂದು ಹೇಳಿದರು.

**ಮಾನ್ಯ ಜಿಲ್ಲಾಧಿಕಾರಿಗಳು:** ಮರಳು ಗಣಿಗಾರಿಕೆ ಟೆಂಡರನ್ನು ಎರಡನೇ ಬಾರಿ 30 ಜೂನಗೆ ಕರೆದಿರುತ್ತಾರೆ. ಈ ಸಭೆಯಲ್ಲಿ ಯಾಕೆ ತಪ್ಪು ಮಾಹಿತಿಯನ್ನು ನೀಡುತ್ತೀರಿ? ಬಹಳ ಬೇಜವಾಬ್ದಾರಿಯಾಗಿದೆ ಎಂದು ಹಟ್ಟಿ ಗೋಲ್ಡ್ ಮೈನ್ಸ್‌ದವರಿಗೆ ತಿಳಿಸಿದರು. ಆ ಮೇಲೆ ನೀವು ರಸ್ತೆ, ಸಿ.ಎಸ್. ಆರ್. ಬಗ್ಗೆ ಏನು ಹೇಳುತ್ತಿಲ್ಲ. 73 ಸಾವಿರ ಟನ್ ಮರಳು ತೆಗೆದರೆ ಎಷ್ಟು ರಾಜಧನವನ್ನು ಕಟ್ಟುತ್ತೀರಿ?

**ಶ್ರೀ ರಾಘವ, ಹಟ್ಟಿ ಗೋಲ್ಡ ಮೈನ್:** ಪ್ರತಿ ವರ್ಷಕ್ಕೆ ಸಿ.ಎಸ್.ಆರ್ ಗೆ ರೂ.2,94,016/- ಮತ್ತು ಸಿ.ಇ.ಆರ್ ಗೆ ರೂ.82,896/- ವೆಚ್ಚ ಇಡಲಾಗಿದೆ. ರಾಜಧನವು ಪ್ರತಿ ಟನ್ ಗೆ 80 ರೂಪಾಯಿ ಆಗುತ್ತದೆ ಎಂದು ತಿಳಿಸಿದರು.

ಶ್ರೀ ಜಗದೀಶ ಐ. ಎಚ್. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-1 ಇವರು ಮಾತನಾಡಿ ಸಾರ್ವಜನಿಕರು ಹೇಳಿರುವ ಅಭಿಪ್ರಾಯಗಳ ನಡುವಳಿಗಳನ್ನು ತಯಾರಿಸಿ, ಆಡಿಯೋ ಮತ್ತು ವಿಡಿಯೋ ರೆಕಾರ್ಡಗಳನ್ನು ಲಗತ್ತಿಸಿ, ನಮ್ಮ ಮಂಡಳಿಯ ಕೇಂದ್ರ ಕಛೇರಿ ಬೆಂಗಳೂರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡುತ್ತೇವೆ ಎಂದರು.

ವಂದನಾರ್ಪಣೆಯೊಂದಿಗೆ ಈ ಸಭೆಯು ಮುಕ್ತಾಯಗೊಂಡಿತು.

Patil NK

(ಶ್ರೀ ನಿತೇಶ್ ಕೆ. ಪಾಟೀಲ)
ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ
ದಂಡಾಧಿಕಾರಿಗಳು ಮತ್ತು ಪರಿಸರ ಸಾರ್ವಜನಿಕ
ಆಲಿಕೆ ಸಭೆ ಅಧ್ಯಕ್ಷರು, ಬೆಳಗಾವಿ, ಕರ್ನಾಟಕ.